**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
**ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65**

# ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

**ದಿನಾಂಕ: 29.09.2020**

## ಈ ವಾರದ ಮುನ್ಸೂಚನೆ (29.09.20 ರಿಂದ 03.10.20 ವರೆಗೆ)

| ನಿಯತಾಂಕಗಳು | 29-09-20 | 30-09-20 | 01-10-20 | 02-10-20 | 03-10-20 |
|---|---|---|---|---|---|
| ಮಳೆ (ಮಿ. ಮಿ.) | 4.2 | 32.4 | 64 | 0.2 | 0.1 |
| ಗರಿಷ್ಠ ಉಷ್ಣಾಂಶ(ಡಿ.ಸೆ.) | 28.3 | 26.6 | 27.2 | 26.9 | 27.9 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 19.1 | 19.6 | 19.2 | 19 | 19.3 |
| ಮೋಡ (ಪ್ರಮಾಣ) | 7 | 8 | 8 | 8 | 7 |
| ಅರ್ದ್ರತೆ 7.20 ಬೆ (ಶೇ) | 96 | 92 | 90 | 94 | 93 |
| ಅರ್ದ್ರತೆ 2.20 ಮ (ಶೇ) | 62 | 73 | 66 | 66 | 59 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 13 | 15 | 18 | 15 | 12 |
| ಗಾಳಿಯ ದಿಕ್ಕು (ಡಿಗ್ರಿ) | 302 | 304 | 293 | 294 | 324 |

**ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ನಾಯನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು, ಮಳೆಯಾಗುವ ಸಂಭವವಿದೆ, ದಿನದ ಗರಿಷ್ಠ ಉಷ್ಣಾಂಶವು 26-28$^{o}$C ಮತ್ತು ಕನಿಷ್ಠ 19–20$^{o}$C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 90–96% ಇದ್ದು, ಮಧ್ಯಾಹ್ನ 59–73% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 12–18 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.**

ಹಸ್ತ ಮಳೆಯ ಕಾಲವು ಸೆಪ್ಟೆಂಬರ್ ತಿಂಗಳ 27 ರಿಂದ ಅಕ್ಟೋಬರ್ 10 ರವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 105.8 ಮಿ. ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮೋಡಕವಿದ ಮತ್ತು ತುಂತುರು ಮಳೆಯ ಮುನ್ಸೂಚನೆ ಇರುವುದರಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸಸ್ಯ ಸಂರಕ್ಷಣೆ ಸಿಂಪಡಣೆಗಳನ್ನು ಕೆಲ ದಿನಗಳವರೆಗೆ ಮುಂದೂಡಿ.
- ಕಳೆದ ಒಂದು ತಿಂಗಳಿನಿಂದ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ಕೃಷಿ ಹೊಂಡದಲ್ಲಿ ಶೇಕರಣೆಯಾಗಿರುವ ನೀರನ್ನು ಉಪಯೋಗಿಸಿ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಕೊಡುವುದು ಸೂಕ್ತ.
- ಗಾಳಿಯ ವೇಗವು ಹೆಚ್ಚಾಗಿರುವ್ವದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.
- ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನ ಜೈವಿಕ ಗೊಬ್ಬರಗಳಾದ ರೈಜೋಬಿಯಮ್ ನಿಂದ ಬೀಜೋಪಚಾರ ಮಾಡಬೇಕು.

**ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು**

ಏಕಬೆಳೆ ಪದ್ದತಿಯಲ್ಲಿ ಈ ಕೆಳಗಿನ ಬೆಳೆ ಮತ್ತು ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ
ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4 ಮತ್ತು 5
ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮು ಅವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ
ರಾಗಿ: ಜಿ.ಪಿ.ಯು–28, ಹೆಚ್.ಆರ್–911, ಜಿ.ಪಿ.ಯು–66, ಎಮ್.ಎಲ್–365, ಇಂಡಾಫ್–5, ಜಿ.ಪಿ.ಯು–45, ಕೆ.ಎಮ್.ಆರ್–204, ಜಿ.ಪಿ.ಯು–26, ಇಂಡಾಫ್–9 ಮತ್ತು ಕೆ.ಎಂ.ಆರ್–301.
ನೆಲಗಡಲೆ: ಟಿ.ಎಮ್.ವಿ–2, ಜೆ.ಎಲ್–24, ಕೆ.ಸಿ.ಜಿ–2 ಮತ್ತು6
ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11
ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಕೆ.ಬಿ.ಸಿ–2, ಐ.ಟಿ–98456–1 ಮತ್ತು ಕೆ.ಎಂ–5
ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ
ನವಣೆ: ಆರ್.ಎಸ್–118, ಕೆ–221–1,ಪಿ.ಎಸ್–4, ಎಸ್.ಐ.ಎ–326
ಸಾಮೆ: ಸಿ.ಒ–2, ಪಿ,ಆರ್.ಸಿ–3,ಒ.ಎಲ್.ಎಂ–203
ಹಾರಕ: ಪಿ.ಎಸ್.ಸಿ–1, ಜೆ.ಎನ್.ಕೆ–364, ಆರ್.ಬಿ.ಕೆ–155, ಜಿ.ಪಿ.ಯು.ಕೆ–3

**ಜಾನುವಾರು:** ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
**ಸಸ್ಯ ಸಂರಕ್ಷಣೆ:** ಗಾಳಿಯ ವೇಗವು ಹೆಚ್ಚಾಗಿರುವುದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.

**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**